ಆ) ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರ ಸಂಖ್ಯೆ ಇರುವುದೆ?

ಶ್ರೀ ಡಾ. ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ವಿದ್ಯಾರ್ಥಿಗಳ ಸಂಖ್ಯೆ ೪೮೪೫೬೬

ಶಿಕ್ಷಕರ ಸಂಖ್ಯೆ ೯೯೯

ಆ) ಹೌದು.

## ಶಾಲೆಗಳಿಗೆ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರ ನೇಮಕ

೬೨೫. ಶ್ರೀ ಐ.ಬಿ. ಶಂಕರ್ (ಚಿಕ್ಕಮಂಗಳೂರು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೇ?

ಅ)ಚಿಕ್ಕಮಗಳೂರು ತಾಲ್ಲೂಕು ಸಹಾಯ ಶಿಕ್ಷಣಾಧಿಕಾರಿಗಳ ಕಚೇರಿಯು ವ್ಯಾಪ್ತಿಗೆ ಒಳಪಡುವ ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಶಾಲೆಗಳು ಎಷ್ಟು?

ಆ) ಈ ಕಚೇರಿಯ ವ್ಯಾಪ್ತಿಗೆ ಬರುವ ಎಲ್ಲಾ ಶಾಲೆಗಳ ಆಡಳಿತ ವೀಕ್ಷಿಸಲು ಕಚೇರಿಯಲ್ಲಿ ಸಾಕಷ್ಟು ಸಿಬ್ಬಂದಿವರ್ಗದವರನ್ನು ಒದಗಿಸಲಾಗಿದೆಯೇ?

ಇ) ಹಾಗಿಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕ್ರಮವೇನು?

ಈ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯನ್ನು ತುಂಬಲು ಸರ್ಕಾರದವರು ಕ್ರಮ ಕೈಗೊಂಡಿರುವರೇ?

ಶ್ರೀ ಡಾ. ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಶಾಲೆಗಳ ಸಂಖ್ಯೆ

೧. ಪ್ರಾಥಮಿಕ ಶಾಲೆ — ೨೧೯

೨. ಹಿರಿಯ ಪ್ರಾಥಮಿಕ ಶಾಲೆ — ೧೦೪

ಒಟ್ಟು ೩೨೩

ಆ) ಹೌದು.

ಇ) ಉದ್ಭವಿಸಿವುದಿಲ್ಲ.

ಈ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

## ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಬಿ.ಎಡ್. ಕಾಲೇಜು

೬೩೪. ಶ್ರೀ ಐ ಬಿ. ಶಂಕರ್ (ಚಿಕ್ಕಮಂಗಳೂರು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೇ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಬಿ.ಎಡ್. ಕಾಲೇಜುಗಳಿವೆ?

ಆ) ಸದರಿ ಖಾಸಗಿ ಕಾಲೇಜಿಗೆ ಎಷ್ಟು ವರ್ಷದ ನಂತರ ಸರ್ಕಾರ ಅನುದಾನ ನೀಡುವುದು?

ಶ್ರೀ ಡಾ. ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಒಂದು (೧)

ಆ) ಸರ್ಕಾರದ ಈಗಿನ ನೀತಿಯಂತೆ ಶಿಕ್ಷಣ ಕಾಲೇಜುಗಳಿಗೆ ಅನುದಾನ ಕೊಡಲು ಬರುವುದಿಲ್ಲ